**ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಮುಧೋಳ**

**ಸಿ.ಸಿ ನಂ**.66/2017

1) ಕರ್ನಾಟಕ ಸರ್ಕಾರ ಪರವಾಗಿ ಮುಧೋಳ ಪೋ.ಠಾಣೆ. ...ಪಿರ್ಯಾದಿ.

**- ವಿರುದ್ಧ -**

1) ರಾಜಾಶಂಕರ ರಾಮಸ್ವಾಮಿ, ವಯಸ್ಸು: 48
ಸಾ: ಚಿಕ್ಕಬೆಟ್ಟ, ಯಲಹಂಕ, ಬೆಂಗಳೂರು.

.....ಆರೋಪಿತರು.

= = = = =

ದಿ: 02.12.2022.
ನಾನು: **ಶ್ರೀಮತಿ. ಸರಸ್ವತಿ ಹೊಟಕರ**
ಎಲ್.ಎಲ್.ಬಿ., ಎಲ್.ಎಲ್.ಎಮ್.
ಹೆಚ್ಚುವರಿ ಪ್ರ.ದ.ನ್ಯಾ.ದಂ., ಮುಧೋಳ.

ಆದ ನಾನು ಈ ಪ್ರಕರಣದ ಆರೋಪಿಯಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಇರುತ್ತದೆ.

-:: **ದೋಷಾರೋಪಣೆ** ::-

ದಿನಾಂಕ: 03.10.2013 ರಂದು ಮುಧೋಳ ಪೋಲಿಸ ಠಾಣಾ ಹದ್ದಿಯಲ್ಲಿ ಬರುವ ರನ್ನ ಸರ್ಕಲ ಹತ್ತಿರ ಆರೋಪಿ ನಂ.1 ನೀನು ಮೃತ ಆರೋಪಿ ನಂ.2 ನ ಗೋಡಾವನದಲ್ಲಿ ವಿದ್ಯುತ್ ಟ್ರಾನ್ಸಫಾರ್ಮಗಳನ್ನು ತಯಾರಿಸಿ ಮಾರಾಟ ಮಾಡುವ ವೆಂಡರ ಅರ್ಪೂವಲ್ ಹೆಸ್ಕಾಂದಿಂದ ಪಡೆದುಕೊಂಡು ಅವರ ಅನುಮತಿ ಇಲ್ಲದೆ ಮೃತ ಆರೋಪಿ ನಂ.2 ರಿಗೆ ಟ್ರಾನ್ಸಫಾರ್ಮಗಳನ್ನು ತಯಾರಿಸಿಸುವ ಒಪ್ಪಂದ ಕರಾರು ಪತ್ರ ಬರೆದುಕೊಟ್ಟಿದ್ದು, ಹೆಸ್ಕಾಂ ವ್ಯಾಪ್ತಿಯಲ್ಲಿ ಸರಬರಾಜು ಆಗುವ ಟ್ರಾನ್ಸಫಾರ್ಮಗಳ ಗುಣಮಟ್ಟ ಪರಿಶೀಲಿಸುವ ಅಧಿಕಾರಿಗಳ ಸಹಿಗಳನ್ನು ಮತ್ತು ಗ್ಯಾರಂಟಿ ಸರ್ಟಿಫಿಕೇಟಗಳ ಕಲರ ಜರಾಕ್ಸ ಮಾಡಿ ಖೊಟ್ಟಿರೀತಿಯಿಂದ ಉಪಯೋಗಿಸಿಕೊಂಡು, ಖೊಟ್ಟಿ ದಾಖಲಾತಿ ತಯಾರಿಸಿ ಅವುಗಳು ಖೊಟ್ಟಿ ಎಂದು ಗೊತ್ತಿದ್ದರೂ ಸಹ ಟ್ರಾನ್ಸಫಾರ್ಮಗಳನ್ನು ಕೊಡುವ ಸಲುವಾಗಿ ಅಧಿಕೃತ ಹೆಸ್ಕಾಂ ಅಧಿಕಾರಿಗಳಿಂದ ಪ್ರಮಾಣಿಕರಿಸಿದಂತೆ ಮಾಡಿ ಚಾಸಾ 8 ರಿಂದ 11 ನೇದ್ದವರಿಗೆ ಮಾರಾಟ ಮಾಡಲು ಪ್ರಯತ್ನಿಸಿದ್ದು, ಆ ಮೇರೆಗೆ **ಭಾ.ದಂ.ಪ್ರ.ಸಂ.ಕಲಂ**.465, 468, 469, 471, 420, 511 **ಸಹವಾಚಕ** 34 **ರ ಅಡಿ** ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲ್ಕಾಣಿಸಿದ ದೋಷಾರೋಪಣೆಗಾಗಿ ನಿಮ್ಮ ಮೇಲೆ ವಿಚಾರಣೆಯಾಗಲು ಆದೇಶಿಸುತ್ತೇನೆ.

ಪ್ರಶ್ನೇ: 1) - ಈ ಆಪಾದನೆಯನ್ನು ಓದಿ ಹೇಳಿದ್ದು ನಿಮಗೆ ತಿಳಿಯಿತೇ?
ಉತ್ತರ-

ಪ್ರಶ್ನೇ: 2) - ಆಪಾದನೆ ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ ?
ಉತ್ತರ- .

(ಆರೋಪಿಗೆ ದೋಷಾರೋಪಣೆಯ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಓದಿ ಹೇಳಿ ವ ಕೇಳಿ ಅವರು ತಿಳಿದುಕೊಂಡು ನಂತರ ಕೊಟ್ಟ ಉತ್ತರವನ್ನು ನಮೂದಿಸಲಾಯಿತು.)

ಓ ಹೇ ಕೇ ಸರಿ ಇದೆ.

ದಿನಾಂಕಃ 02.12.2022. **ಹೆಚ್ಚುವರಿ ಜೆ.ಎಂ.ಎಫ್.ಸಿ.,ಮುಧೋಳ**.

1) ರಾಜಾಶಂಕರ ರಾಮಸ್ವಾಮಿ,